# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಮೊರಾರ್ಜಿ ದೇಸಾಯಿ ಶತಮಾನೋತ್ಸವ ಗಂಗಾ ಕಲ್ಯಾಣ ನೀರಾವರಿ ಯೋಜನೆಯ ಪ್ರಾರಂಭ ಹಾಗೂ 1995-96ನೇ ಸಾಲಿನಿಂದ ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ:-

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಇವರ ಪತ್ರ ಸಂಖ್ಯೆ: ಕಪಜಾಪಅನಿ:ಕೊಬಾವಿ:ಯೋ:06:95-96 9542, ದಿನಾಂಕ: 15-9-1995.
2. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಇವರ ಪತ್ರ ನಂ: ಕಹಿನಿ:ನಿಂಯೋ:ಸಿಆರ್-15:95-96 ದಿ:7-12-1995.

ಪ್ರಸ್ತಾವನೆ:-

1995-96ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ರಾಜ್ಯದಲ್ಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಲ್ಲಿ ತೀರಾ ಹಿಂದುಳಿದ ಕುಟುಂಬಗಳಿಗೆ ಸಮುದಾಯ ನೀರಾವರಿ ಬಾವಿಗಳನ್ನು ಒದಗಿಸಲು ಮಾರ್ಪಡಿಸಿದ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಉದ್ದೇಶಿಸಿದೆ ಎಂದು ಆಶ್ವಾಸನೆ ನೀಡಿದ ಹಿನ್ನೆಲೆಯಲ್ಲಿ, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು ಉಲ್ಲೇಖಿಸಿರುವ ಪತ್ರಗಳೊಂದಿಗೆ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿದ್ದವು. ಪ್ರಸ್ತಾವನೆಗಳನ್ನು ಪರಿಶೀಲಿಸಿ, ಗಂಗಾ ಕಲ್ಯಾಣ ಯೋಜನೆಯನ್ನು 1995-96ನೇ ಸಾಲಿನಿಂದ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಕಾರಣ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 82 ಎಸ್‌ಡಿಸಿ 95, ಬೆಂಗಳೂರು, ದಿನಾಂಕ: 03-01-96

ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳ ರೈತರ ಜಮೀನು ಒಂದೇ ಕಡೆ 8-15 ಎಕರೆವರೆಗೆ ಇದ್ದಲ್ಲಿ ಅದನ್ನು ಒಂದು ಘಟಕವೆಂದು ಪರಿಗಣಿಸಿ ಅಂತಹ ಜಮೀನುಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವ ಸಲುವಾಗಿ ಉದ್ದೇಶಿಸಿರುವ ಈ ಕೆಳಕಂಡ ಗಂಗಾ ಕಲ್ಯಾಣ ಯೋಜನೆಯನ್ನು 1995-96ನೇ ಸಾಲಿನಿಂದ ಅನುಷ್ಠಾನಗೊಳಿಸಲು ಸರ್ಕಾರ ಮಂಜೂರಾತಿ ನೀಡಿದೆ.

ಎ. ಯೋಜನೆಯ ಮುಖ್ಯಾಂಶಗಳು:-

1. ಒಂದೇ ಕಡೆ ಕನಿಷ್ಠ 8 ಎಕರೆಗಳು ಅಥವಾ 15 ಎಕರೆಗಳು ಜಮೀನು ಹೊಂದಿಕೊಂಡಂತೆ ಇರುವ ಸಣ್ಣ ಮತ್ತು ಅತೀ ಸಣ್ಣ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳು ಮತ್ತು ಇತರೆ ಹಿಂದುಳಿದ ವರ್ಗಗಳ ರೈತರ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸುವುದು.
2. ಘಟಕದ ಎಲ್ಲಾ ಜಮೀನಿಗೂ ನೀರು ಪೂರೈಕೆಯಾಗಲು ಎರಡು:ಮೂರು ಕೊಳವೆ ಬಾವಿಗಳನ್ನು ಕೊರೆಯುವುದು.
3. ರಾತ್ರಿ ವೇಳೆಯಲ್ಲಿ ನೀರನ್ನು ಶೇಖರಿಸಲು 10,000 ಗ್ಯಾಲನ್ ಸಾಮರ್ಥ್ಯದ ಒಂದು ಅಥವಾ ಎರಡು ನೀರಿನ ತೊಟ್ಟಿಗಳನ್ನು ಕಟ್ಟುವುದು.
4. ಪ್ರತಿಯೊಬ್ಬ ಫಲಾನುಭವಿಯ ಜಮೀನಿಗೆ ನೀರನ್ನು ಹಾಯಿಸಲು ಸಣ್ಣ ಕಾಲುವೆ ಅಥವಾ ಪೈಪುಗಳನ್ನು ಅಳವಡಿಸುವುದು.
5. ಅಗತ್ಯವಿರುವ ಕಡೆಗಳಲ್ಲಿ ಜಮೀನನ್ನು ಸಮತಟ್ಟು ಮಾಡುವುದು.
6. ಒಂದು ಅಥವಾ ಎರಡು ಪಂಪಿನ ಮನೆಯನ್ನು ಒದಗಿಸುವುದು.

ಮು.ಪು.ನೋ.

ಬಿ) ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಸಾಕಷ್ಟು ಕ್ಷೇತ್ರ ಸಿಬ್ಬಂದಿಯನ್ನು ಹೊಂದಿಲ್ಲದಿರುವ ಕಾರಣ ಈ ನಿಗಮದ ಪರವಾಗಿ ಕ್ಷೇತ್ರ ಮಟ್ಟದಲ್ಲಿ ಇತರೆ ಹಿಂದುಳಿದ ವರ್ಗಗಳಿಗೂ ಈ ಯೋಜನೆಯನ್ನು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುವುದು.

ಸಿ) <u>ಯೋಜನಾ ವೆಚ್ಚ:—</u>

8 ಎಕರೆ ಜಮೀನು ಇರುವ ಘಟಕಗಳಲ್ಲಿ ಎರಡು ಕೊಳವೆ ಬಾವಿಗಳನ್ನು ಅಳವಡಿಸಲು ಸುಮಾರು 1·87 ಲಕ್ಷ ಹಾಗೂ 15 ಎಕರೆಗಳ ಜಮೀನಿರುವ ಘಟಕಗಳಲ್ಲಿ ಮೂರು ಕೊಳವೆ ಬಾವಿಗಳನ್ನು ಅಳವಡಿಸಲು ಸುಮಾರು 3·36 ಲಕ್ಷ ರೂ·ಗಳ ವರೆಗೆ ವೆಚ್ಚ ಮಾಡುವುದು.

ಡಿ) <u>ಯೋಜನೆಗೆ ಆರ್ಥಿಕ ಸಹಾಯ:—</u>

ಯೋಜನೆಯ ಒಟ್ಟು ವೆಚ್ಚವನ್ನು ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಅಥವಾ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ತಮಗೆ ಸಂಬಂಧಪಟ್ಟ ಪ್ರಕರಣಗಳಿಗೆ ಯೋಜನಾ ವೆಚ್ಚವನ್ನು ಭರಿಸುವುದು.

ಇ) <u>ನಿರ್ವಹಣೆ:—</u>

ಈ ಯೋಜನೆಯ ಮೊದಲ ಐದು ವರ್ಷಗಳ ನಿರ್ವಹಣೆಯನ್ನು ಸಂಬಂಧಪಟ್ಟ ನಿಗಮಗಳೇ ಭರಿಸುವುದು. ಈ ಯೋಜನೆಯಡಿಯಲ್ಲಿ ಸ್ಥಾಪಿಸಲಾದ ಘಟಕಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ಸ್ಥಳೀಯ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಯೊಬ್ಬರನ್ನು ಅರೆ ಕಾಲಿಕ ಆಧಾರದ ಮೇಲೆ ಮಾಹೆಯಾನ ರೂ·200·00ಗಳ ಗೌರವಧನದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದು. ಈ ವ್ಯಕ್ತಿಯನ್ನು ಜಿಲ್ಲಾ ಮಟ್ಟದ ಸಮಿತಿಯು ಆಯ್ಕೆ ಮಾಡುವುದು.

ಎಫ್) <u>ಜಲಬಳಕೆದಾರರ ಸಂಘ:—</u>

ಈ ಯೋಜನೆಯ ಫಲಾನುಭವಿಗಳೆಲ್ಲಾ ಸೇರಿ ಒಂದು ಸಂಘವನ್ನು ರಚಿಸಿಕೊಳ್ಳತಕ್ಕದ್ದು; ಈ ಯೋಜನೆಯ ನಿರ್ವಹಣೆಯನ್ನು ಐದು ವರ್ಷಗಳ ನಂತರ ಈ ಸಂಘದ ವಶಕ್ಕೆ ನೀಡುವುದು. ಫಲಾನುಭವಿಗಳ ಜಮೀನಿನಲ್ಲಿ ನಿರ್ಮಾಣ ಮಾಡಿರುವ ಚರಾಸ್ತಿ ಮತ್ತು ಸ್ಥಿರಾಸ್ತಿಯು ಸರ್ಕಾರದ ಸ್ವತ್ತಾಗಿದ್ದು, ಇದನ್ನು ಮಾರುವ ವರ್ಜ್ಯದಿಂದ ಕಾಪಾಡಿಕೊಳ್ಳುವುದಾಗಿ ಪ್ರತಿಯೊಬ್ಬ ಫಲಾನುಭವಿಯಿಂದಲೂ ಮುಚ್ಚಳಿಕೆ ಬರೆಸಿಕೊಳ್ಳುವುದು. ಐದು ವರ್ಷಗಳ ತರುವಾಯ ಈ ಯೋಜನೆಯ ಪೂರ್ಣ ನಿರ್ವಹಣೆ ವೆಚ್ಚವನ್ನು ಸಂಘವೇ ಭರಿಸುವುದು.—

ಜಿ) ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಈ ಕೆಳಕಂಡ ಹಣವನ್ನು ಉಪಯೋಗಿಸಿಕೊಂಡು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳಿಗೆ ಸೇರಿದ ಹತ್ತು ಸಾವಿರ ಎಕರೆ ಜಮೀನಿಗೆ ಹಾಗೂ ಇತರೆ ಹಿಂದುಳಿದ ವರ್ಗಗಳವರಿಗೆ ಸೇರಿದ ~~2000~~ 2500 ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ನೀಡಲಾಗುವುದು :—

| | |
|---|---|
| ಆಯವ್ಯಯದಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರಿಗಾಗಿ ಮಾಡಿರುವ ಅವಕಾಶ (2225-02-800-0-08)(2225-02-800-0-02) | 8·00 ಕೋಟಿ·ರೂ· |
| ವಿಶೇಷ ಘಟಕ ಯೋಜನೆಯ ಒಂದುಗೂಡಿಸಿದ ಹಣದಿಂದ | 5·00 " |
| ಪುನರ್ ವಿನಿಯೋಗದಿಂದ | 7·32 " |
| ಒಟ್ಟು | 20·32 " |
| ಇತರೆ ಹಿಂದುಳಿದ ವರ್ಗಗಳವರಿಗೆ ಆಯವ್ಯಯದಲ್ಲಿ ಮಾಡಿರುವ ಅವಕಾಶ(2225-03-800-0-03) | 5·00 " |

——3)

ಜೆ) ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಇನ್ನೊಂದು ನೀರಾವರಿ ಯೋಜನೆ ಅಂದರೆ ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಯಡಿಯಲ್ಲಿ ಶೇಕಡ 75 ರಷ್ಟು (ಗರಿಷ್ಟ ರೂ.30,000ಗಳನ್ನು) ಸಹಾಯಧನವನ್ನಾಗಿ ನೀಡುತ್ತಿದೆ. ಉಳಿದ ವೆಚ್ಚವನ್ನು ಸಾಲದ ರೂಪದಲ್ಲಿ ಫಲಾನುಭವಿಯು ಭರಿಸಬೇಕಾಗುತ್ತದೆ. ಗಂಗಾ ಕಲ್ಯಾಣ ಯೋಜನೆಯು ಸಮಗ್ರವಾಗಿದ್ದು, ಹೆಚ್ಚಿನ ಅನುಕೂಲ ಹಾಗೂ ವ್ಯಾಪ್ತಿಯನ್ನು ಹೊಂದಿರುವ ಕಾರಣ ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು ಕೈಬಿಡುವುದು. ಆದರೂ ಭೂ ಒಡೆತನ ಯೋಜನೆಯಡಿಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಿಗೆ ವಿತರಿಸುವ ಜಮೀನುಗಳು ಒಂದೇ ಕಡೆ ಇಲ್ಲದಿರುವ ಪ್ರಯುಕ್ತ ಅಂತಹ ಸ್ಥಳಗಳಲ್ಲಿ ವೈಯುಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು ಜಾರಿ ಇರುವ ನಿಯಮದನ್ವಯ ಮುಂದುವರಿಸುವುದು.

ಕೆ) ನಬಾರ್ಡ್ ಸಂಸ್ಥೆ ಕೆಲವು ಪ್ರದೇಶಗಳನ್ನು 'ಕಪ್ಪು' ಮತ್ತು 'ಗ್ರೇ' ಪ್ರದೇಶಗಳೆಂದು ಪರಿಗಣಿಸಿರುತ್ತದೆ. ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಯುವ ಕೊಳವೆ ಬಾವಿಗಳ ಬಿಂದುಗಳನ್ನು ತಜ್ಞರ ಮುಖಾಂತರ ಅಂತಿಮ ಮಾಡುವುದರಿಂದ ಮೇಲಿನ ನಿಬಂಧನೆಯು ಈ ಯೋಜನೆಗೆ ಅನ್ವಯಿಸುವುದಿಲ್ಲ. ನೀರು ಇಲ್ಲದೆ ಹಣ ಇಲ್ಲ ಎಂಬ ಷರತ್ತು ಸಹ ಈ ಯೋಜನೆಗೆ ಅನ್ವಯಿಸುವುದಿಲ್ಲ.

ಎಲ್) ಒಂದು ಕೊಳವೆ ಬಾವಿಯಿಂದ ಇನ್ನೊಂದು ಕೊಳವೆಬಾವಿಗೆ ಕನಿಷ್ಟ 825 ಅಡಿಗಳಿಗಿಂತ ಕಡಿಮೆ ಅಂತರ ಇರಬಾರದೆಂಬ ನಿಬಂಧನೆಯು ಈ ಯೋಜನೆಗೆ ಅನ್ವಯಿಸುವುದಿಲ್ಲ.

ಈ

ಈ ಯೋಜನೆಯಡಿಯಲ್ಲಿ ಕೊರೆಯಲಾಗುವ ಕೊಳವೆಬಾವಿಗಳ ಬಿಂದುಗಳನ್ನು ಗುರುತಿಸಲು ಎನ್.ಜಿ.ಆರ್.ಐ. ಹೈದರಾಬಾದ್ ಸಂಸ್ಥೆಯ ಭೂ ವಿಜ್ಞಾನಿಗಳ ಅಥವಾ ನಿವೃತ್ತ ಸರ್ಕಾರಿ ಭೂ ವಿಜ್ಞಾನಿಗಳ ಸೇವೆಯನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಅನುಮತಿ ನೀಡಿರುತ್ತದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಸಕಇ 211 ಆಂಆಸ(1)9[illegible] ದಿನಾಂಕ: 14-9-95, ಯೋಜನಾ ಇಲಾಖೆಯ ಟಿಪ್ಪಣಿಸಂಖ್ಯೆ: ಪಿಡಿ 102 ಪಿಟಿಪಿ 95 ದಿನಾಂಕ: 21-10-95 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1173 ವೆಚ್ಚ-3:95 ದಿನಾಂಕ: 18-12-95ರ ಮುಖಾಂತರ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ:-

(ಇ. ಕೃಷ್ಣ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

"ನಕಲು ಪ್ರತಿ"

[illegible] 5/1/96
ನಿರ್ದೇಶಕರ ಪರವಾಗಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ
ಇಲಾಖೆ, ಬೆಂಗಳೂರು

ಹೆಚ್) ಫಲಾನುಭವಿಗಳು:—

ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳು ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ಸಣ್ಣ ಮತ್ತು ಅತೀ ಸಣ್ಣ ರೈತರು ಫಲಾನುಭವಿಗಳಾಗಿರುತ್ತಾರೆ. ಇತರೆ ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಶೇಕಡ 70 ರಷ್ಟು ಫಲಾನುಭವಿಗಳನ್ನು ವರ್ಗ—1, 2ಎ, 2ಬಿ ಗಳಿಂದ ಆಯ್ಕೆ ಮಾಡುವುದು. ಮತ್ತು ಶೇಕಡಾ 30ರಷ್ಟು ಫಲಾನುಭವಿಗಳನ್ನು ವರ್ಗ—3ಎ ಮತ್ತು 3ಬಿ ಯಿಂದ ಆಯ್ಕೆ ಮಾಡುವುದು.

ಐ) ಸಾಂಸ್ಥಿಕ ಚೌಕಟ್ಟು:—

ಈ ಯೋಜನೆಯ ಅನುಷ್ಠಾನದ ಬಗ್ಗೆ ನಿಯತಕಾಲಿಕವಾಗಿ ಪರಿಶೀಲಿಸಲು ಈ ಕೆಳಕಂಡವರನ್ನೊಳಗೊಂಡ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಿದೆ:—

| | |
|---|---|
| 1. ಮಾನ್ಯ ಸಮಾಜ ಕಲ್ಯಾಣ ಸಚಿವರು | ಅಧ್ಯಕ್ಷರು |
| 2. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಆರ್ಥಿಕ ಆಯುಕ್ತರು | ಸದಸ್ಯರು |
| 3. ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ | ಸದಸ್ಯರು |
| 4. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ | ಸದಸ್ಯರು |
| 5. ಪ್ರಧಾನ ಇಂಜಿನಿಯರ್, ಸಾರ್ವಜನಿಕ ಆರೋಗ್ಯ ಇಂಜಿನಿಯರ್ ವಲಯ (ಪಿಹೆಚ್ಇ) | ಸದಸ್ಯರು |
| 6. ಸಮಾಜ ಕಲ್ಯಾಣ ನಿರ್ದೇಶಕರು | ಸದಸ್ಯರು |
| 7. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶಕರು | ಸದಸ್ಯರು |
| 8) ಗಣಿ ಮತ್ತು ಭೂವಿಜ್ಞಾನ ನಿರ್ದೇಶಕರು | ಸದಸ್ಯರು |
| 9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಭೂಸೇನಾ ನಿಗಮ | ಸದಸ್ಯರು |
| 10. ವ್ಯವಸ್ಥಾಪಕ ನಿರ್ದೇಶಕರ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ | ಸದಸ್ಯರು |
| 11. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | ಸದಸ್ಯರು |
| 12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ | ಸದಸ್ಯ ಕಾರ್ಯದರ್ಶಿ |

ಈ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಪ್ರಗತಿಯನ್ನು ಪರಿಶೀಲಿಸುವುದು.

ಈ ಕೆಳಕಂಡ ಸದಸ್ಯರನ್ನೊಳಗೊಂಡ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿದೆ.

| | |
|---|---|
| 1. ಜಿಲ್ಲಾಧಿಕಾರಿಗಳು, | ಅಧ್ಯಕ್ಷರು |
| 2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ | ಸದಸ್ಯರು |
| 3. ಪ್ರಧಾನ ಕೃಷಿ ಅಧಿಕಾರಿ | ಸದಸ್ಯರು |
| 4. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ | ಸದಸ್ಯರು |
| 5. ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ : ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

ಈ ಜಿಲ್ಲಾ ಮಟ್ಟದ ಸಮಿತಿಯು ಜಮೀನುಗಳನ್ನು ಫಲಾನುಭವಿಗಳನ್ನು ಮತ್ತು ಸೌಲಭ್ಯದಾರರುಗಳನ್ನು ಆಯ್ಕೆ ಮಾಡುವುದು. ಹಾಗೂ ಈ ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ನಿಯತಕಾಲಿಕವಾಗಿ ಮಾಡುವುದು.

——4)